ಶ್ರೀ ಪಿ. ಎಂ ಉದಾಸಿ.—ಮಾನ್ಯ ಅಧ್ಯಕ್ಷರೇ ೧೯೭೮–೭೯ರಲ್ಲಿ ಐದು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಬೊಮ್ಮನಹಳ್ಳಿ ಮತ್ತು ತಿಳವಳ್ಳಿ ಗ್ರಾಮಗಳಲ್ಲಿ ಪ್ರಾರಂಭವಾದ ನಳದ ಯೋಜನೆಗಳು ಇದುವರೆಗೆ ಮುಗಿದಿಲ್ಲ. ಎಷ್ಟು ದಿವಸದಲ್ಲಿ ಇದನ್ನು ಮುಗಿಸುತ್ತೀರಿ ? ಹಾನಗಲ್ ತಾಲೂಕನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಿಸುವ ಸಲುವಾಗಿ ಪರಿಶೀಲನೆಯಲ್ಲಿದೆ ಎಂದು ಎರಡು ವರ್ಷದಿಂದ ಹೇಳುತ್ತಿದ್ದೀರಿ. ೧೯೮೪–೮೫ ರಲ್ಲಾದರೂ ಇದನ್ನು ಬರಗಾಲ ಪೀಡಿತ ಪ್ರದೇಶ ಯೋಜನೆಯಲ್ಲಿ ಸೇರಿಸುತ್ತೀರಾ ?

ಶ್ರೀ ಅಬ್ದುಲ್‌ನಜೀರ್‌ಸಾಬ್.—ಮಾನ್ಯ ಸಭಾಧ್ಯಕ್ಷರೇ, ೧೬ ಕುಡಿಯುವ ನೀರಿನ ನಳದ ಯೋಜನೆಗಳು ಬಿನಿವೆ, ಅದರಲ್ಲಿ ಎರಡು ಮಾತ್ರ ಮುಗಿದಿಲ್ಲ. ಹಾನಗಲ್ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶ ಎಂದು ಡಿ.ಪಿ.ಎ.ಪಿ. ಯೋಜನೆಗೆ ಸೇರಿಸಬೇಕೆಂದು ಅವರು ಹೇಳಿದ್ದಾರೆ. ಆದರೆ ಅದಕ್ಕೆ ಕೇಂದ್ರ ಸರಕಾರದ ಕೆಲವು ಗೈಡ್‌ಲೈನ್ಸ್ ಇದೆ, ಅಲ್ಲಿಂದ ಸ್ವಡಿ ಟೀಮ್ ಬಂದು ಇಂತಹದ್ದನ್ನೇ ಸೇರಿಸಬೇಕೆಂದು ರೆಕಮೆಂಡೇಷನ್ ಮಾಡುತ್ತಾರೆ. ಕೇಂದ್ರದ ಯೋಜನೆ ವಲಯದಲ್ಲಿ ಸೇರಿಸುವುದನ್ನು ಅವರು ಸೇರಿಸುತ್ತಾರೆ ಇನ್ನು ರಾಜ್ಯ ವಲಯದಲ್ಲಿ ಈ ಕಾರ್ಯಕ್ರಮ ವಿಸ್ತರಿಸುವುದನ್ನು ಮುಂದಿನ ವರ್ಷ ಪರಿಶೀಲನೆ ಮಾಡುತ್ತೇವೆ.

ಕೃಷಿ ಇಲಾಖೆಯಲ್ಲಿರುವ ಕೃಷಿ ವಿಸ್ತರಣಾಧಿಕಾರಿಗಳು

೪೩೭ (ಆರ್) ಶ್ರೀ ಎಂ. ಮಹಾದೇವ್ (ನಂಜನಗೂಡು) ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ೧೯೫೯ ರಲ್ಲಿ ಕೃಷಿ ಇಲಾಖೆಯಲ್ಲಿ ನೇಮಕಗೊಂಡ ಗ್ರಾಮಸೇವಕರನ್ನು ೧೯೭೦ರವರೆಗೆ ಅಭಿವೃದ್ಧಿ ಇಲಾಖೆಗೆ ವರ್ಗಮಾಡಿ ಪುನಃ ಅವರನ್ನು ಕೃಷಿ ಇಲಾಖೆಗೆ ಕೃಷಿ ವಿಸ್ತರಣಾಧಿಕಾರಿಗಳೆಂದು ನೇಮಕ ಮಾಡಿರುವುದು ವಾಸ್ತವಾಂಶವಲ್ಲವೇ;

ಆ) ಹಾಗಿದ್ದಲ್ಲಿ, ೧೯೫೯–೭೦ ರಿಂದ ಅಭಿವೃದ್ಧಿ ಇಲಾಖೆಯಲ್ಲಿ ಸೇವೆಸಲ್ಲಿಸಿದ ಈ ಗ್ರಾಮ ಸೇವಕರ ಜೇಷ್ಠತೆಯನ್ನು ಸಹಾಯಕ ಕೃಷಿ ನಿರ್ದೇಶಕರಾಗಿ ಬಡ್ತಿ ನೀಡಲು ಪರಿಗಣಿಸಲಾಗಿದೆಯೇ ;

ಇ) ಹಾಗಿಲ್ಲದಿದ್ದಲ್ಲಿ ೧೯೫೯ ರಿಂದ ಅವರ ಜೇಷ್ಠತೆಗೆ ರಕ್ಷಣೆ ನೀಡಿ ಅವರನ್ನು ಸಹಾಯಕ ಕೃಷಿ ನಿರ್ದೇಶಕರಾಗಿ ಬಡ್ತಿ ನೀಡಲು ಅವರ ಅಹವಾಲನ್ನು ಗಣನೆಗೆ ತೆಗೆದುಕೊಂಡು ಸರ್ಕಾರ ಪರ್ಯಾಲೋಚಿಸುವುದೇ ?

ಶ್ರೀ ಎಸ್. ರೇವಣ್ಣ (ಕೃಷಿ ರಾಜ್ಯ ಸಚಿವರು).

ಅ) ಗ್ರಾಮಸೇವಕರು ಕೃಷಿ ಇಲಾಖೆಯಲ್ಲಿ ನೇಮಕಗೊಂಡಿಲ್ಲ, ಆದರೆ ಅಭಿವೃದ್ಧಿ ಇಲಾಖೆಯಲ್ಲಿ ನೇಮಕಗೊಂಡಿರುವರು.

ಆ) ಪರಿಗಣಿಸಲಾಗುವುದು

ಇ) ಪರಿಗಣಿಸಲಾಗುವುದು

೧೦–೦೦ ಎ.ಎಂ.

ಶ್ರೀ ಎಂ. ಮಹದೇವ್.—ಮಾನ್ಯ ಮಂತ್ರಿಯವರು ಕೃಷಿ ಇಲಾಖೆಯಲ್ಲಿ ನೇಮಿಸಿಕೊಂಡಿಲ್ಲ ವೆಂದು ಹೇಳಿದ್ದಾರೆ. ಕೃಷಿ ಇಲಾಖೆಯ ಮನವಿ ಮೇರೆಗೆ ಸುಮಾರು ೩೬ ಜನರನ್ನು ಆರ್.ಡಿ.ಸಿ. ಇಲಾಖೆಯಿಂದ ಕಳುಹಿಸಿದ್ದಾರೆ. ಅವರಿಗೆ ಸುಮಾರು ೧೨ ವರ್ಷ ಸರ್ವೀಸ್ ಆಗಿದೆ. ಇಲ್ಲಿಯವರೆವಿಗೂ ಅವರಿಗೆ ಯಾವುದೆ ರೀತಿಯ ಬಡ್ತಿಯನ್ನು ಕೊಟ್ಟಿಲ್ಲ. ಹೊಸದಾಗಿ ನೇಮಕ ಮಾಡಿಕೊಂಡಿರುವವರಿಗೆ ಬಡ್ತಿ ಸಿಗುತ್ತಿದೆ. ಕೂಡಲೇ ಇದರ ಬಗ್ಗೆ ಕ್ರಮ ತೆಗೆದುಕೊಂಡು ಸರಿಪಡಿಸುತ್ತೀರಾ ?

ಶ್ರೀ ಎಸ್. ರೇವಣ್ಣ.—ಅನ್ಯಾಯವಾಗಿದ್ದರೆ, ನ್ಯಾಯ ದೊರಕಿಸಿಕೊಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಇಂಡಿವಿಜಿಯಲ್ ಗ್ರಿವೆನ್ಸೆಸ್ ಇಲ್ಲಿ ತರುವುದು ಸರಿಯಲ್ಲ.

ಶ್ರೀ ಎಂ. ಮಹದೇವ್.—ಯಾವರೀತಿಯ ನ್ಯಾಯ ದೊರಕಿಸಿಕೊಡುತ್ತೀರಿ ?

ಶ್ರೀ ಎಸ್. ರೇವಣ್ಣ.—ಸೇವಾ ನಿಯಮದಂತೆ ಅನ್ಯಾಯವಾಗಿದ್ದರೆ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಮಹದೇವ್,—೧೨ವರ್ಷಗಳು ಸರ್ವಿಸ್ ಆಗಿದೆ. ಕೃಷಿ ಇಲಾಖೆಗೆ ಬಂದು ಸುಮಾರು ವರ್ಷಗಳಾಗಿವೆ. ಅದನ್ನು ಸೇರಿಸಿ ನ್ಯಾಯ ದೊರಕಿಸಿಕೊಡಿ.

ಅಧ್ಯಕ್ಷರು.—ಮಂತ್ರಿಗಳು ಬಂದು ಒಂದು ವರ್ಷವಾಗಿದೆ; ಅವರಿಗೂ ಸ್ವಲ್ಪ ಅವಕಾಶ ಕೊಡಿ

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ, ತಮಗೂ ಸಮಧಾನವಾಗಲಿಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಅವರಿಗೆ ಸಮಧಾನವಾಗಿದ್ದರೆ, ನಮಗೂ ಸಮಧಾನವಾಗುತ್ತಿತ್ತು. ಇವತ್ತು ಅಲ್ಲಿ ೩೬ ಜನ ನೌಕರರುಗಳು ತೊಂದರೆ ಪಡುತ್ತಿದ್ದಾರೆ. ಅವರಿಗೆ ನ್ಯಾಯದೊರಕಿಸಿಕೊಡುತ್ತಿರಾ ?

ಶ್ರೀ ಎಸ್ ರೇವಣ್ಣ.—ಯಾವ ರೀತಿಯಲ್ಲಿ ಅನ್ಯಾಯವಾಗಿದೆ ಎನ್ನುವುದನ್ನು ನೋಡಿ ಅದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಪುತ್ತೂರು ತಾಲ್ಲೂಕಿನ ಕೊಯ್ಲದಲ್ಲಿರುವ ಪಶುಸಂಗೋಪನಾ ಕೇಂದ್ರ

೪೩೮(೧೧೨೨) ಶ್ರೀ ಕೆ. ರಾಮಭಟ್ (ಪುತ್ತೂರು) ಮಾನ್ಯ ಪಶುಸಂಗೋಪನಾ, ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ಪುತ್ತೂರು ತಾಲ್ಲೂಕು ಕೊಯ್ಲಾದಲ್ಲಿ, ಕೊಯ್ಲಾ ಪಶುಸಂಗೋಪನಾ ಕೇಂದ್ರ ಯಾವ ವರ್ಷ ಪ್ರಾರಂಭಿಸಲಾಯಿತು ಹಾಗೂ ಇದರ ಉದ್ದೇಶವೇನು ;

ಆ) ಈ ಪಶುಸಂಗೋಪನಾ ಕೇಂದ್ರ ಪ್ರಾರಂಭವಾದಂದಿನಿಂದ ೧೯೫೩ ರ ಡಿಸೆಂಬರ್ ಅಂತ್ಯದ ವರೆಗೆ ತೊಡಗಿಸಿದ ಹಣ ಎಷ್ಟು, ಬಂದ ಆದಾಯವೆಷ್ಟು?

ಇ) ಇದು ಪ್ರಾರಂಭವಾದಂದಿನಿಂದ ೧೯೫೩ರ ಡಿಸೆಂಬರ್ ಅಂತ್ಯದವರೆಗೆ ಆದ ಒಟ್ಟು ನಷ್ಟವೆಷ್ಟು ;

ಈ) ಈ ಕೇಂದ್ರವನ್ನು ಪುನರ್ಜೀವಗೊಳಿಸಲು ಸರಕಾರವು ಯೋಚಿಸುತ್ತಿದೆಯೇ ? ಹಾಗಿದ್ದಲ್ಲಿ ಆ ಬಗ್ಗೆ ಏನೇನು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—(ಪಶುಸಂಗೋಪನಾ ಮತ್ತು ತೋಟಗಾರಿಕೆ ಸಚಿವರು).

ಅ) ಜಿಲ್ಲಾ ಜಾನುವಾರು ಕ್ಷೇತ್ರ ಕೊಯ್ಲಾ, ೧೯೫೦ನೇ ಇಸವಿಯಲ್ಲಿ ಪ್ರಾರಂಭವಾಯಿತು ಇದರ ಉದ್ದೇಶ—

೧ ಒಳ್ಳೆಯ ವಂಶಾವಳಿ ಹೋರಿಗಳನ್ನು ಉತ್ಪಾದಿಸುವುದು ಮತ್ತು ಸರಬರಾಜು ಮಾಡುವುದು.

೨ ಆರೋಗ್ಯಕರವಾದ ಹಾಲನ್ನು ಉತ್ಪಾದಿಸುವುದು ಮತ್ತು ಸರಬರಾಜು ಮಾಡುವುದು

೩ ರೈತರಿಗೆ ಪಶುವೈದ್ಯಕೀಯ ಸೇವೆಗಳನ್ನು ಒದಗಿಸುವುದು.

೪ ಕೋಳಿ ಮರಿ ಸಾಕಣಿಕೆ ಮಾಡುವುದು ಮತ್ತು ವಿತರಣೆ ಮಾಡುವುದು.

೫ ಉತ್ತಮ ತಳಿಯ ವಿವಿಧ ಜಾತಿಯ ಹುಲ್ಲನ್ನು ಬೆಳೆಯುವುದು ಇತ್ಯಾದಿ.